SERVICE ABOVE SELF
2025-26



Rotary
विश्वमित्रः
ವಿಶ್ವಮಿತ್ರ
VISHWAMITHRA
Weekly House Bulletin of Rotary Club Shimoga, R.I. Dist. 3182

UNITE FOR GOOD
Rotary
Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –11 ದಿನಾಂಕ : 17–09–2025

## ದಿನಾಂಕ: 17.09.2025ರ ವಾರದ ಸಭೆ

**ದಿನಾಂಕ: 17.09.2025 ರಂದು ಈ ಸಾಲಿನ 11 ನೇ ಸಭೆ– ಅತ್ಯಂತ ವಿಶೇಷ ಸಭೆ. ಏಕೆಂದರೆ ನಮ್ಮ ನಾಡುಕಂಡ ಬುದ್ಧಿವಂತ ಮತ್ತು ಧೀಮಂತ ವ್ಯಕ್ತಿತ್ವ ಹೊಂದಿದ್ದ, ಮೈಸೂರು ಸಂಸ್ಥಾನದ ದಿವಾನರಾಗಿ, ಜನರ ಅಭ್ಯುದಯಕ್ಕಾಗಿ ಕೈಗೊಂಡ ಕಾರ್ಯದಿಂದ ಜನಾನುರಾಗಿಯಾಗಿ ನೂರ್ಕಾಲ ಬಾಳಿದ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮದಿನದ ಅಂಗವಾಗಿ ನಮ್ಮ ಕ್ಲಬ್‌ನ ಇಂಜಿನಿಯರುಗಳನ್ನು ಸನ್ಮಾನಿಸಲಾಯಿತು. ಜೊತೆಗೆ ಅಂದು ಸಂಗೀತ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ, ಅದಕ್ಕಾಗಿ ತನ್ನನ್ನೇ ಮುಡುಪಾಗಿಟ್ಟಿರುವ ಶಿವಮೊಗ್ಗೆಯ ವಿದ್ವಾನ್ ಡಾ. ಎಸ್.ಆರ್ ನಾಗರಾಜ್ ಮತ್ತು ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರು, ಮೃದಂಗ ವಿದ್ವಾನ್ ಶ್ರೀ ಅರವಿಂದ ಹೊಳ್ಳರವರೊಂದಿಗೆ ನಮ್ಮ ಕ್ಲಬ್‌ಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕರ್ನಾಟಕ ಸಂಗೀತದಲ್ಲಿ ಶಿಕ್ಷಣದ ಹಂತಗಳು ಎಂಬ ವಿಷಯದಲ್ಲಿ ಮಾತನಾಡಿ, ಕೃತಿ, ವಚನ, ಭಜನೆಗಳನ್ನು ಪ್ರಸ್ತುತ ಪಡಿಸಿದರು. ಇವರೊಂದಿಗೆ ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದು ಕಾರ್ಯಕ್ರಮವು ಬಹು ಚೆನ್ನಾಗಿ ಮೂಡಿಬಂದು ಆಗಮಿಸಿದ್ದ ರೋಟರಿ ಬಂಧುಗಳು ಮೆಚ್ಚುಗೆ ವ್ಯಕ್ತಪಡಿಸಿದರು.**




ಆರಂಭದಲ್ಲಿ ರೊ.ಭಾರ್ಗವಿ ಭಟ್‌ರವರು ಸುಶ್ರಾವ್ಯವಾಗಿ "ಶ್ರೀ ಚಾಮುಂಡೇಶ್ವರಿ ಅಮ್ಮ" ಎಂಬ ಗೀತೆಯನ್ನು ಹಾಡುವುದರ ಮೂಲಕ ಪ್ರಾರ್ಥನೆಯನ್ನು ಮಾಡಿದರು. ರೊ. ವೆಂಕಟರಮಣ ಜಿ. ಹೆಗಡೆಯವರಿಂದ ಸ್ವಾಗತವಾಯಿತು. ಅಧ್ಯಕ್ಷರು ಮಾತನಾಡಿ ದಿನಾಂಕ: 16.09.2025 ರಂದು ನಮ್ಮ ಕ್ಲಬ್‌ನ ಮಾಜಿ ಕಾರ್ಯದರ್ಶಿ ರೊ. ಕೆ ಉಮೇಶ್ ಶೆಣ್ಯೆರವರ ಧರ್ಮಪತ್ನಿ ಶ್ರೀಮತಿ ಲತಾ ವಿ. ಶೆಣ್ಯೆರವರು ನಿಧನರಾಗಿದ್ದಾರೆ ಎಂದು ತಿಳಿಸಿದರು. ಮೃತರ ಗೌರವಾರ್ಥ ಒಂದು







ನಿಮಿಷದ ಮೌನವಾಚರಿಸಿ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಕಳೆದ ವಾರದಲ್ಲಾದ ಕಾರ್ಯಕ್ರಮಗಳ ವರದಿ ಹಾಗೂ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಇಂಜಿನಿಯರ್ಸ್ ಡೇ ಪ್ರಯುಕ್ತ ನಮ್ಮ ಕ್ಲಬ್‌ನಲ್ಲಿರುವ ಇಂಜಿನಿಯರ್ ವೃತ್ತಿಯಲ್ಲಿರುವವರಿಗೆ ಸನ್ಮಾನಿಸಲಾಯಿತು. ಮಾಜಿ ಸಹಾಯಕ ಗವರ್ನರ್‌ರವರಾದ ರೊ. ಸುನೀತಾ ಶ್ರೀಧರ್‌ರವರು ಈ ಕಾರ್ಯಕ್ರಮ ನಡೆಸಿಕೊಟ್ಟರು. ಅವರು ಇಂಜಿನಿಯರ್ಸ್‌ಡೇ ಆಚರಣೆಯ ಮಹತ್ವದ ಬಗ್ಗೆ ತಿಳಿಸುತ್ತಾ ಸೆಪ್ಟೆಂಬರ್ 15 ಇಂಜಿನಿಯರ್ಸ್‌ಡೇ

### ಈ ವಾರದ ಸಭೆ

**ದಿನಾಂಕ: 24–09–2025, ಬುಧವಾರ** **ಸಂಜೆ 7:30**

**ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮ**

**ಶ್ರೀ ಅಸಾದುಲ್ಲಾ ಬೇಗ್** ಇವರಿಂದ

**'ಮನೋಹರ ಶಾಯರಿಯ ಸಂಜೆ'**

**ಕಾರ್ಯಕ್ರಮ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













ಆಚರಿಸುತ್ತಿದ್ದು, ನಾಡು ಕಂಡ ಅಪ್ರತಿಮ ಇಂಜಿನಿಯರ್ ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ ಪ್ರಯುಕ್ತ ನಮ್ಮ ಕ್ಲಬ್‌ನ ಇಂಜಿನಿಯರುಗಳಿಗೆ ಸನ್ಮಾನ ಮಾಡಲಾಗುತ್ತಿದೆ ಎಂದು ತಿಳಿಸಿ, ಅಂದಿನ ಸಭೆಯಲ್ಲಿ ಆಗಮಿಸಿದ್ದ ನಮ್ಮ ಈ ಕೆಳಕಂಡ ಇಂಜಿನಿಯರುಗಳನ್ನು ವೇದಿಕೆಗೆ ಆಹ್ವಾನಿಸಿದರು. ಅವರುಗಳಿಗೆ ಅಧ್ಯಕ್ಷ ಕಾರ್ಯದರ್ಶಿಯವರು, ರೊ. ಶ್ರೀಮತಿ ಸುನೀತಾ ಶ್ರೀಧರ್ ಮುಖ್ಯಅತಿಥಿ ವಿದ್ವಾನ್ ಡಾ.ಎಸ್. ಆರ್. ನಾಗರಾಜ್‌ರವರು, ರೊ.ಪಿಡಿಜಿ. ಡಾ. ಪಿ. ನಾರಾಯಣರವರು ಸೇರಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿದರು.

ನಮ್ಮ ಕ್ಲಬ್‌ನ ಇಂಜಿನಿಯರುಗಳಾದ ರೊ. ಆರ್.ಆನಂದ್, ರೊ.ವಿಶ್ವಾಸ್ ಎಲಬುರ್ಗಿ, ರೊ.ಎಸ್.ಎನ್. ನಾಗರಾಜ್, ರೊ. ಬಿ.ಎನ್. ವಿಶ್ವೇಂದ್ರ, ರೊ.ವೈ.ಗೋಪಾಲಕೃಷ್ಣ, ರೊ. ಲಕ್ಷ್ಮೀನಾರಾಯಣ ಭಟ್, ರೊ.ನಾಗಪತಿ ವಿ.ಭಟ್, ರೊ. ಎಂ.ಎನ್.ಎಸ್. ಮಣಿ, ರೊ. ಎ. ಮಂಜುನಾಥ್, ರೊ. ನಿರ್ಮಲಾ ಶಿವಾನಂದ್, ರೊ. ಮಹಮ್ಮದ್ ಇಬ್ರಾಹಿಂ ಇವರುಗಳನ್ನು ಸನ್ಮಾನಿಸಲಾಯಿತು.

ರೊ. ಎಂ.ಎನ್.ಎಸ್.ಮಣಿಯವರು ಅಂದಿನ ಮುಖ್ಯ ಅತಿಥಿಗಳಾದ ವಿದ್ವಾನ್ ಡಾ.ಎಸ್.ಆರ್. ನಾಗರಾಜ್ ಮತ್ತು ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ವಿದ್ವಾನ್ ನಾಗರಾಜ್‌ರವರು ವೃತ್ತಿಯಲ್ಲಿ ಟ್ಯಾಕ್ಸ್ ಕನ್ಸಲ್ಟೆಂಟ್ ಆಗಿದ್ದು ಪ್ರವೃತ್ತಿಯಲ್ಲಿ ಕರ್ನಾಟಕ ಸಂಗೀತದ ಹಾಡುಗಾರರಾಗಿದ್ದಾರೆ. ಇವರು "ಮಹಾರಾಜ ಸ್ವಾತಿತಿರುನಾಳ್ ಮತ್ತು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಇವರುಗಳ ದೇವಿ ಮತ್ತು ಶಿವಪರ ಕೃತಿಗಳ ಸಂಗೀತ – ಸಾಹಿತ್ಯದ ತುಲನಾತ್ಮಕ ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ಮೈಸೂರು ವಿಶ್ವ ವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ವಿದ್ವಾನ್ ನಾಗರಾಜರ ಪತ್ನಿ ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರು, ಮೈಸೂರಿನ ಸುಕನ್ಯಾ ಪ್ರಭಾಕರ್‌ರವರ ಶಿಷ್ಯೆಯಾಗಿದ್ದು, ಕರ್ನಾಟಕ ಸಂಗೀತದಲ್ಲಿ ವಿದ್ವತ್ ಪಡೆದಿರುತ್ತಾರೆ. ಪ್ರಸ್ತುತ ಇವರು ಪಿಳ್ಳಂಗಿರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರೊಂದಿಗೆ ಪಕ್ಕವಾದ್ಯದವರಾದ ಶ್ರೀ ಅರವಿಂದ ಹೊಳ್ಳರವರು, ನಗರದ ಹಾಗೂ ನಾಡಿನ ವಿವಿಧೆಡೆಯಲ್ಲಿ ಮೃದಂಗ ನುಡಿಸಿ ಖ್ಯಾತರಾಗಿದ್ದಾರೆ.

ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಸಭಾ ಕಾರ್ಯಕ್ರಮದ ಮುಕ್ತಾಯಕ್ಕಾಗಿ ವಂದನಾರ್ಪಣೆ ತಿಳಿಸಿದರು. ನಂತರ ಅಧ್ಯಕ್ಷರು ಸಭೆಯನ್ನು ಮುಕ್ತಾಯಗೊಳಿಸಿ ವೇದಿಕೆಯನ್ನು ಅಂದಿನ ಅತಿಥಿಗಳಿಗೆ ಸಂಗೀತ ಕಾರ್ಯಕ್ರಮಕ್ಕಾಗಿ ಅನುವು ಮಾಡಿಕೊಟ್ಟರು.

**ಸಂಗೀತ ಕಾರ್ಯಕ್ರಮ:** ವಿದ್ವಾನ್ ಡಾ. ಎಸ್. ಆರ್.ನಾಗರಾಜ್ ಮತ್ತು ವಿದುಷಿ ಶ್ರೀಮತಿ ವೀಣಾನಾಗರಾಜ್‌ರವರು ವೇದಿಕೆಯಲ್ಲಿ ಮೃದಂಗದ ಪಕ್ಕವಾದ್ಯದೊಂದಿಗೆ ಶ್ರೀ ಅರವಿಂದ ಹೊಳ್ಳರವರ ಜೊತೆಗೂಡಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ವಾನ್ ಡಾ. ನಾಗರಾಜರವರು ಮಾತನಾಡಿ ಕರ್ನಾಟಕ ಸಂಗೀತ ಶಿಕ್ಷಣದ ಕಲಿಕೆಯ ವಿವಿಧ ಹಂತಗಳು, ಆರಂಭದ ರಾಗಗಳು ಮತ್ತು ಕಲಿಕೆಯ ರಾಗಗಳ ಬಗ್ಗೆ ಮಾತನಾಡಿದರು. ಯಾವ ಸ್ಥಳದಲ್ಲೇ ನೋಡಿರಿ, ಅಲ್ಲಿ ಸಂಗೀತವಿದೆ. ಸಂಗೀತಕ್ಕೆ ಮನಸೋಲದವರು ಯಾರೂ ಇಲ್ಲ. ಸಂಗೀತದಿಂದ ನಿಮ್ಮ ಮನಸ್ಸು ಶಾಂತ ಸ್ಥಿತಿಗೆ ಬರುತ್ತದೆ. ಸಂಗೀತವನ್ನು ಕಲಿಯಲು ಬೇರೆಯ ತರಹದಾದ ಶಿಕ್ಷಣವೇ ಇದೆ. ಅದರಂತೆ ಕಲಿತರೆ ಒಳ್ಳೆಯದು ಎಂದರು. ಇಲ್ಲಿ ಪ್ರಾಥಮಿಕ, ಪ್ರೌಢದರ್ಜೆಯಲ್ಲಿ ಕಲಿತು ಉತ್ತಮ ಗಾಯಕರಾಗಬಹುದು. ಸಂಗೀತದಲ್ಲಿ ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತವೆಂದು ಎರಡು ವಿಧವಿದೆ. ಮಾಯಾಮಾಳವಗೌಳ ಎಂಬ ರಾಗದಿಂದಲೇ ಕೃತಿ ಮತ್ತು ಹಾಡಿನ ಪ್ರಾರಂಭವಾಗುತ್ತದೆ. ಪುರಂದರದಾಸರನ್ನು ಕರ್ನಾಟಕ ಸಂಗೀತದ ಪಿತಾಮಹ ಎನ್ನುತ್ತಾರೆ. ಇಂಥಹ ಕೃತಿಗಾರರ ಕೃತಿಗಳಿಂದಲೇ ಸಂಗೀತಕ್ಕೊಂದು ಚೌಕಟ್ಟು ಬಂದಿದೆ. ಅದು ವಿಕಾಸವಾಗಿ ಶಾಸ್ತ್ರೀಯ ಸಂಗೀತ ಕ್ಷೇತ್ರ ಈ ಮಟ್ಟಿನ ಬೆಳವಣಿಗೆ ಕಂಡಿದೆ.

ತಂತ್ರಜ್ಞಾನ ಸಂಗೀತ ಕ್ಷೇತ್ರದಲ್ಲೂ ಮುಂದುವರೆದಿದ್ದು, ಈಗ ತಂಬೂರಿ ಹಿಡಿಯಬೇಕಾಗಿಲ್ಲ. ಆ ಜಾಗದಲ್ಲಿ ಶೃತಿ ಪೆಟ್ಟಿಗೆ ಬಂದಿದೆ. ಸಂಗೀತದಲ್ಲಿ ಶಾರೀರ ಬಹಳ ಮುಖ್ಯವಾಗಿದ್ದು, ನಾವು ಹಾಡುವರಾಗವನ್ನು ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಒಯ್ದು ಹಾಡಬಹುದು. ಯುಗಳಗೀತೆ ಅಥವಾ ಜೊತೆಯಾಗಿ ಹಾಡುವಾಗ ಒಬ್ಬೊಬ್ಬರ ಶೃತಿ ಒಂದೊಂದು ತೆರನಾಗಿದ್ದು, ವಿವಿಧ ಸ್ತರಗಳಲ್ಲಿ ಹಾಡಬೇಕಾಗುತ್ತದೆ ಎನ್ನುವುದನ್ನು ತಿಳಿಸುತ್ತಾ, ಆ ಬಗ್ಗೆ ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರು ಸ್ವರಗಳ ಏರಿಳಿತವನ್ನು ಹಾಡಿ ತೋರಿಸಿದರು. ಯುಗಳ ಗೀತೆಯಲ್ಲಿ ಸೀಮಿತಗೊಂಡು ಹಾಡಬೇಕು. ಆರೋಹಣ ಮತ್ತು ಅವರೋಹಣ ಸಮರ್ಪಕವಾಗಿರಬೇಕು. 'ಶೃತಿ ಮಾತಾ ಲಯಃ ಪಿತಾ' ಎನ್ನುತ್ತಾರೆ. ಸಾಹಿತ್ಯಕ್ಕೆ ತಕ್ಕಂತೆ ಯಾವ ಭಾವವಿದೆ ಅನ್ನುವುದು ತಿಳಿದು ಹಾಡಬೇಕು, ಅಲ್ಲದೇ ಇಲ್ಲಿ ಲಯವೂ ಮುಖ್ಯವಾಗುತ್ತದೆ. ವಿದ್ವಾನ್ ಡಾ. ಎಸ್. ಆರ್.ನಾಗರಾಜ್‌ರವರು






ಕಲ್ಯಾಣಿರಾಗ ಹೇಗೆ ಹಂತ ಹಂತವಾಗಿ ಬದಲಾಗುತ್ತದೆ ಎಂಬುದನ್ನು ಹಾಡಿ ಪ್ರತಿಪಾದಿಸಿದರು. ಜತಿ ಸ್ವರದ ಬಗ್ಗೆ ಮಾತನಾಡಿದ ಶ್ರೀಯುತರು, ಅದರ ಪಠ್ಯಕ್ರಮ, ರಾಗದ ವಿಶೇಷ ಸಂಚಾರ, ಸ್ವರಗಳ ಪರಿಚಯ, ಧ್ವನಿ ಸಂಸ್ಕರಣೆ, ವರ್ಣಗಳ ಅರಿವಿನಿಂದ ಪೂರ್ಣ ಪ್ರಮಾಣದ ಗಾಯಕನಾಗಲು ಅಭ್ಯಾಸ ಮಾಡಬೇಕು. ಗಾಯಕನಾದವನು ರಾಗವನ್ನು, ಸಾಹಿತ್ಯವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಕಲಿಯುತ್ತಾರೆ. (ಇದರ ಪಠ್ಯಕ್ರಮ ವಿವರಿಸಿದರು) ವರ್ಣವನ್ನು ಕಲಿತಾದ ಮೇಲೆ ಯಾವ ಪ್ರಕಾರದಲ್ಲಿ ಹಾಡಬಹುದು ಎಂಬುದನ್ನು ಗಾಯನದ ಮೂಲಕ ವಿವರಿಸಿದರು. ತ್ಯಾಗರಾಜರ ಬಗ್ಗೆ, ಅವರ ಕೃತಿಗಳ ಬಗ್ಗೆ ಮಾತನಾಡುತ್ತಾ ಕೃತಿ ಆಥವಾ ಹಾಡುಗಳ ರಚನೆಯಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳಿರುತ್ತವೆ ಎಂದರು. ಈ ನಡುವೆ ಕವಿ ಜಿ.ಎಸ್. ಶಿವರುದ್ರಪ್ಪ ರಚಿತ "ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು-ಮಣ್ಣುಗಳ ಗುಡಿಯೊಳಗೆ" ಎಂಬ ಹಾಡನ್ನು ಪ್ರಸ್ತುತಪಡಿಸಿದರು. ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರು ಹಿಂದಿ ಹಾಡೊಂದನ್ನು ಪ್ರಸ್ತುತಪಡಿಸಿದರು.

ಕನಕದಾಸರ ಕೃತಿ "ನಾನು ನೀನು ಎನ್ನದಿರು ಹೀನ ಮಾನವ", ಮುಪ್ಪಿನ ಷಡಾಕ್ಷರಿ ಬರೆದ ವಚನ -"ಯಾರು ಅರಿಯರು ನಿನ್ನ", "ಜನನ ಮರಣ ಭಯ ಶೋಕವಿದೂರಂ ಪಿಬರೇರಾಮರಸಂ" ಎಂಬ ಭಜನೆಯನ್ನು ಹಾಡಿ ರಂಜಿಸಿ, ಸರ್ವರ ಮನಸೂರೆಗೊಂಡರು. ಇವರಿಗೆ ಜೊತೆಯಾಗಿ ಮೃದಂಗ ವಾದನದಲ್ಲಿ ಶ್ರೀ ಅರವಿಂದ ಹೊಳ್ಳರವರು ಸಹಕಾರ ನೀಡಿದ್ದು, ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಅಧ್ಯಕ್ಷರಾದ ರೊ.ಆರ್.ಆನಂದ್‌ರವರು ಮಾತನಾಡಿ, ನಾವೆಲ್ಲ ಆ ಕಾಲದ ಸಂಗೀತ ಲೋಕಕ್ಕೆ ಹೋಗಿದ್ದೆವು ಎನ್ನುವಂತೆ ಭಾಸವಾಯಿತು ಇಂದಿನ ಕಾರ್ಯಕ್ರಮ ಎನ್ನುತ್ತಾ ಹಾಡುಗಳನ್ನು ಹೇಗೆ ಹೊಂದಿಸಿಕೊಂಡು ಹಾಡಬೇಕು ಎಂಬುದನ್ನು ವಿವರಿಸಿ ಹಾಡು ಮತ್ತು ಭಜನೆಗಳನ್ನು ಪ್ರಸ್ತುತ ಪಡಿಸಿದ ಹಾಗೂ ಕಲಿಕೆಯ ಹಂತಗಳನ್ನು ವಿವರಿಸಿದ ವಿದ್ವಾನ್ ಡಾ.ಎಸ್. ಆರ್. ನಾಗರಾಜ್ ಮತ್ತು ವಿದುಷಿ ಶ್ರೀಮತಿ ವೀಣಾ ನಾಗರಾಜ್‌ರವರಿಗೆ ಹಾಗೂ ಪಕ್ಕವಾದ್ಯದಲ್ಲಿ ಸಹಕರಿಸಿದ ಶ್ರೀ ಅರವಿಂದ ಹೊಳ್ಳರವರಿಗೆ ಕೃತಜ್ಞತೆ ತಿಳಿಸಿದರು. ಇವರುಗಳಿಗೆ ರೊ.ವೈ.ವಿ.ವೆಂಕಟರಮಣ ಜೋಯ್ಸ್, ರೊ. ಮಲ್ಲಿಕಾ ವಿ.ಜೋಯ್ಸ್ ಮತ್ತು ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್‌ರವರು ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

## ಮೈಗ್ರೇನ್ ತಲೆನೋವಿಗೆ ಮನೆಮದ್ದುಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ

- ಶುಂಠಿ ಕಷಾಯ ಕುಡಿಯುವುದರಿಂದ ತಲೆನೋವು ಹಾಗೂ ವಾಂತಿ ತಗ್ಗುತ್ತದೆ.
- ನೀರು ಕುಡಿಯುವುದು ದೇಹದಲ್ಲಿ ನೀರಿನ ಕೊರತೆ ಮೈಗ್ರೇನ್ ಹೆಚ್ಚಿಸುತ್ತದೆ. ದಿನವಿಡೀ ಸಾಕಷ್ಟು ನೀರು ಕುಡಿಯಿರಿ.
- ತುಳಸಿ ಎಲೆಗಳನ್ನು ಕಷಾಯ ಮಾಡಿ ಕುಡಿಯುವುದರಿಂದ ತಲೆನೋವು ಕಡಿಮೆ ಆಗುತ್ತದೆ.
- ತಣ್ಣೀರಿನಲ್ಲಿ ಹತ್ತಿ ನೆನಸಿ ಹಣೆ ಮೇಲೆ ಇಟ್ಟರೆ ನೋವು ತಗ್ಗುತ್ತದೆ.
- ತೆಂಗಿನ ಎಣ್ಣೆ ಅಥವಾ ಎಣ್ಣೆಯಲ್ಲಿ ಶುಂಠಿ ಪುಡಿ ಹಾಕಿ ಬಿಸಿ ಮಾಡಿ ತಲೆಗೆ ಮಸಾಜ್ ಮಾಡಿದರೆ ಶಾಂತಿ ಸಿಗುತ್ತದೆ.
- ಸಾಕಷ್ಟು ವಿಶ್ರಾಂತಿ ಮತ್ತು ನಿಯಮಿತ ನಿದ್ರೆ ಮೈಗ್ರೇನ್‌ಗೆ ನಿಯಂತ್ರಣಕ್ಕೆ ಮುಖ್ಯ.
- ಹಸಿಮೆಣಸು ಹಾಕಿದ ಚಹಾ ಕುಡಿಯುವುದರಿಂದ ತಲೆನೋವು ಕಡಿಮೆ ಆಗತ್ತದೆ.

**ಸೂಚನೆ: ಮೈಗ್ರೇನ್ ಸಮಸ್ಯೆ ನಿರಂತರವಾಗಿದ್ದರೆ ವೈದ್ಯರನ್ನು ಸಂಪರ್ಕಿಸುವುದು ಅವಶ್ಯಕ.**

## THE OBJECT OF ROTARY


The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.



## ಸಂಪಾದಕೀಯ

### ಪ್ರೀತಿಯ ಬೀಜ ಬಿತ್ತೋಣ.. !!



ಅದೊಂದು ದೊಡ್ಡ ಫ್ಯಾಕ್ಟರಿ. ನೂರಾರು ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದರು. ಒಬ್ಬ ಯುವಕ ಹೊಸದಾಗಿ ಕೆಲಸಕ್ಕೆ ಸೇರಿಕೊಂಡ. ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ. ಒಂದು ಸಂಜೆ ಕೆಲಸ ಮುಗಿಯುವ ಹೊತ್ತು. ಕೆಲ ವಸ್ತುಗಳನ್ನು ಇಡಲು ಆತ ಅಲ್ಲಿನ ಶೈತ್ಯಾಗಾರ (ಶಿಥಿಲಾಗಾರ)ಕ್ಕೆ ಹೋದ. ಆ ಸಾಮಗ್ರಿಗಳನ್ನು ಜೋಡಿಸಿಡುವಷ್ಟರಲ್ಲೇ ಕೋಣೆಯ ಬಾಗಿಲು ಮುಚ್ಚಿಕೊಂಡು ಬಿಟ್ಟಿತು. ಆ ಯುವಕ ಓಡಿ ಬಂದು ಬಾಗಿಲು ಬಡಿದ. ಕಿರುಚಿದ, ಕೂಗಿದ, ಕೆಲಸದ ಅವಧಿ ಮುಗಿದಿದ್ದರಿಂದ ಉಳಿದ ಕೆಲಸಗಾರರು ಮನೆಗೆ ಹೊರಡುವ ಗಡಿಬಿಡಿಯಲ್ಲಿದ್ದರು. ಯಾರಿಗೂ ಆತನ ಕೂಗು ಕೇಳಲೇ ಇಲ್ಲ. ಎಷ್ಟು ಹೊತ್ತು ಕೂಗಿದರೂ ಯಾರೂ ಬರಲಿಲ್ಲ. ಕಿರುಚಿ ಕಿರುಚಿ ಸುಸ್ತಾದ ಆತ ಪ್ರಜ್ಞೆ ತಪ್ಪಿ ಅಲ್ಲಿಯೇ ಬಿದ್ದ.

ಯುವಕನಿಗೆ ಎಚ್ಚರವಾದಾಗ ಆತ ಕಾವಲುಗಾರನ ಕೊಠಡಿಯಲ್ಲಿ ಹಾಸಿಗೆ ಮೇಲೆ ಮಲಗಿದ್ದ. ಸುಧಾರಿಸಿಕೊಂಡ ನಂತರ ಆತನಿಗೆ ತಾನು ಆ ಕೊಠಡಿಯಲ್ಲಿ ಸಿಕ್ಕಿಹಾಕಿಕೊಂಡ ಘಟನೆ ನೆನಪಾಯಿತು. ತಾನು ಪಾರಾಗಲು ಕಾವಲುಗಾರನೇ ಕಾರಣ ಎಂಬುದು ತಿಳಿಯಿತು. ಆತನಿಗೆ ಧನ್ಯವಾದ ಅರ್ಪಿಸಿ, ತನ್ನನ್ನು ಹೇಗೆ ರಕ್ಷಿಸಿದೆ ಎಂದು ಪ್ರಶ್ನಿಸಿದ. ಅದಕ್ಕೆ ಕಾವಲುಗಾರ, "ಈ ಕಾರ್ಖಾನೆಯಲ್ಲಿ ನೂರಾರು ಜನರು ಕೆಲಸ ಮಾಡುತ್ತಾರೆ. ಅವರಲ್ಲಿ ಕೆಲವೊಬ್ಬರು ಮಾತ್ರ ನನ್ನನ್ನು ಮಾತನಾಡಿಸುತ್ತಾರೆ. ನೀನು ಸಹ ಕಾರ್ಖಾನೆ ಪ್ರವೇಶಿಸುವಾಗ ಮತ್ತು ಕೆಲಸ ಮುಗಿಸಿ ಹೊರಡುವಾಗ ನನ್ನನ್ನು ಮಾತಾಡಿಸುತ್ತಿದ್ದೆ. ನಿನ್ನೆ ಕೆಲಸಕ್ಕೆ ಹೋಗುವಾಗ ಮಾತನಾಡಿಸಿ ಹೋದ ನೀನು, ಸಂಜೆ ಎಷ್ಟು ಹೊತ್ತಾದರೂ ಹೊರ ಬಂದಂತೆ ತೋರಲಿಲ್ಲ. ಯಾಕಿರಬಹುದು, ಏನಾಗಿರಬಹುದೆಂದು ನೋಡಿದಾಗ ಎಲ್ಲಿಯೂ ಕಾಣಿಸಲಿಲ್ಲ. ಕಾರ್ಖಾನೆಯ ಮೂಲೆ ಮೂಲೆ ಹುಡುಕಿದೆ. ಅಂತಿಮವಾಗಿ ಶೈತ್ಯಾಗಾರ (ಶಿಥಿಲಾಗಾರ)ದಲ್ಲಿ ಹುಡುಕಿದಾಗ ಪ್ರಜ್ಞೆ ತಪ್ಪಿ ಬಿದ್ದದ್ದನ್ನು ಕಂಡೆ. ನಿನ್ನನ್ನು ಎತ್ತಿ ತಂದು ನನ್ನ ಕೊಠಡಿಯಲ್ಲಿ ಮಲಗಿಸಿದೆ" ಎಂದು ವಿವರಿಸಿದ. ಆ ಯುವಕ ಕಾವಲುಗಾರನೊಂದಿಗೆ ಸೌಹಾರ್ದ ಸಂಬಂಧವನ್ನು ಇಟ್ಟುಕೊಳ್ಳದಿದ್ದರೆ, ಬದುಕಿ ಬರುವುದು ಕಷ್ಟವೇ ಆಗುತ್ತಿತ್ತೇನೋ !

ಚಿದಂಬರದಾಸರಾದ ಸಂತಶ್ರೇಷ್ಠ ರಾಜಾರಾವು ಮಹಾರಾಜರು ಅಭಂಗವೊಂದರಲ್ಲಿ 'ತ್ವಮುಖೆ ಬೋಲೆ ಜಾಣ ಆಚಾರತೇ ಉಪಾಸನಾ' ಎಂದು ಹೇಳಿದ್ದಾರೆ. ಇದರ ಅರ್ಥವೆಂದರೆ, ಒಳ್ಳೆಯ ಮಾತುಗಳನ್ನು ಆಡುವುದು ಸಹ ಉಪಾಸನೆ ಇದ್ದಂತೆ.

ಮಾವಿನ ಬೀಜ ನೆಟ್ಟು ಬೆಳೆಸಿದರೆ ಸಿಹಿಯಾದ ಮಾವಿನ ಹಣ್ಣು ಸಿಗುತ್ತದೆ. ಬೇವಿನ ಬೀಜ ಬಿತ್ತಿದರೆ ಕಹಿ ಬೇವು ಸಿಗುತ್ತದೆ. ಅದರಂತೆ ನಾವು ಪ್ರೀತಿಯ ಬೀಜ ಬಿತ್ತಿದರೆ ನಮಗೆ ಪ್ರೀತಿಯ ಬೆಳೆ ಸಿಗುತ್ತದೆ. ಇದಕ್ಕಾಗಿ ನಾವೇನೂ ದುಡ್ಡು ಖರ್ಚು ಮಾಡಬೇಕಿಲ್ಲ. ನಗುನಗುತ್ತ ಮಾತನಾಡಿದರೆ, ತನ್ನಂತೆ ಬೇರೆಯವರು ಎಂಬ ಮನೋಭಾವನೆ ಬೆಳೆಸಿಕೊಂಡರೆ ಸಾಕು. ನಾವು ಖರ್ಚಿಲ್ಲದ ಈ ದಾರಿಯಲ್ಲಿ ನಡೆಯಲು ಪ್ರಯತ್ನಿಸೋಣ. ಎಲ್ಲರನ್ನೂ ನಗುನಗುತ್ತಾ ಮಾತನಾಡಿಸೋಣ. ತನ್ಮೂಲಕ ಭಗವಂತನಿಗೆ ಹತ್ತಿರವಾಗೋಣ.

• **ರೊ. ಎಂ. ಮಾಧವಾಚಾರ್**

ಸೇವೆಗೆ ಮುಂದಾಗುವ ಮೊದಲು ಪ್ರೀತಿಸುವುದನ್ನು ಕಲಿಯಬೇಕು, ಪ್ರೀತಿ ಇಲ್ಲದೆ ಮಾಡಿದ ಸೇವೆ ಸೇವೆಯಾಗುವುದಿಲ್ಲ – **ಡಾ. ಅಂಬೇಡ್ಕರ್**




### 3. Basic Education and Literacy Month


- Initiate E- learning and Happy School projects
- Conduct Adult Literacy programs - Involve youngsters and college students.
- Distribute books (especially Value Based educational books) to school libraries and encourage reading habit.
- Focus on new ideas like training Primary and Preprimary teachers to include and involve special children and children with learning disorders.
- Plan programs with the Education Department in promoting literacy.

## THE 4-WAY TEST




1. Is it the TRUTH
2. Is it FAIR to all concerned?
3. Will it build GOODWILL & BETTER FRIENDSHIP?
4. Will it be BENEFICIAL to all concerned?

## AREA OF FOCUS




To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495